# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 99 |
| **ಮಾನ್ಯ ಸದಸ್ಯರ ಹೆಸರು** | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | 15.07.2024 |
| **ಉತ್ತರಿಸಬೇಕಾದ ಸಚಿವರು** | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ನಗರದಲ್ಲಿ ಮಾಣಿಕೇಶ್ವರ ಕಾಲೋನಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆಯಾಗಿ ವರ್ಷಗಳೇ ಕಳೆದರೂ ಇಲ್ಲಿ ತಜ್ಞ ವೈದ್ಯರು, ಸಿಬ್ಬಂದಿಗಳ ಕೊರತೆಯಿಂದಾಗಿ ರೋಗಿಗಳಿಗೆ ಸಕಾಲದಲ್ಲಿ ಚಿಕಿತ್ಸೆ ಲಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಸಿಬ್ಬಂದಿಗಳ ಕೊರತೆ ಇದೆ; ಕೂಡಲೇ ಅವಶ್ಯವಿರುವ ಸಿಬ್ಬಂದಿಗಳನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುವುದೇ; | ಕಲಬುರಗಿ ನಗರದಲ್ಲಿ ಮಾಣಿಕೇಶ್ವರ ಕಾಲೋನಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಯಾವುದೇ ಸಿಬ್ಬಂದಿಗಳ ಕೊರತೆ ಇರುವುದಿಲ್ಲ. ಇದು ಒಂದು ನಗರ ಪ್ರಾಥಮಿಕ ಆರೋಗ್ಯ ಕೇಂದ್ರವಾಗಿದ್ದು, ಇಲ್ಲಿ ತಜ್ಞ ವೈದ್ಯರ ಹುದ್ದೆ ಇರುವುದಿಲ್ಲ. |
| ಆ) | ಈ ಆಸ್ಪತ್ರೆಗೆ ಒಟ್ಟು ಎಷ್ಟು ಮೊತ್ತದ ಔಷಧಿಗಳನ್ನು ಸರ್ಕಾರ ಸರಬರಾಜು ಮಾಡಲಾಗಿದೆ; ಇದರಲ್ಲಿ ವಿತರಣೆಯಾಗದೆ ಹಾಳಾಗಿರುವ ಔಷಧೀಯ ಪ್ರಮಾಣವೆಷ್ಟು; ಅಧಿಕಾರಿಗಳು ಎಷ್ಟು ಬಾರಿ ಈ ಆಸ್ಪತ್ರೆಯ ಔಷಧಿ ಮಳಿಗೆಗೆ ಹೋಗಿ ವೀಕ್ಷಣೆ ಮಾಡಿರುತ್ತಾರೆ; ಮಾಡದೇ ಇದ್ದಲ್ಲಿ, ಇದಕ್ಕೆ ಹೊಣೆ ಯಾರು? (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು). | ಸರ್ಕಾರದಿಂದ ಸರಬರಾಜು ಮಾಡಿದ ಔಷಧಿಗಳ ವಿವರ ಕೆಳಕಂಡತಿದೆ.<br><br>ಕ್ರ.ಸಂ / ಸಾಲು / ಮೊತ್ತ<br>1. / 2021-22 / ರೂ.2,06,243.00<br>2. / 2022-23 / ರೂ.3,22,045.00<br>3. / 2023-24 / ರೂ.2,49,674.00<br><br>ಔಷಧಿ ಅಧಿಕಾರಿಗಳು ಪ್ರತಿನಿತ್ಯ ಉಗ್ರಾಣದ ವೀಕ್ಷಣೆ ಮಾಡುತ್ತಾರೆ. ಸರಬರಾಜು ಮಾಡಲಾದ ಔಷಧಿಯಲ್ಲಿ ಯಾವುದೂ ಹಾಳಾಗಿರುವುದಿಲ್ಲಾ. |

**ಆಕುಕ 33 ಹೆಚ್ ಎಸ್ ಡಿ 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.**